# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

## ಮಲ್ಲೇಶ್ವರಂ, ಬೆಂಗಳೂರು – 3

2017-18 ನೇ ಸಾಲಿನ ಪರಿಷ್ಕೃತ ಪಠ್ಯಾಧಾರಿತ

ಎಸ್.ಎಸ್.ಎಲ್.ಸಿ. ಪರೀಕ್ಷೆ

# CCE - RF

[ಶಾಲಾ ಅಭ್ಯರ್ಥಿಗಳಿಗಾಗಿ]

## ಪ್ರಶ್ನೆ ಪತ್ರಿಕೆಯ ವಿನ್ಯಾಸ,

## ಪರಿಷ್ಕೃತ ನೀಲ ನಕಾಶೆ

ಹಾಗೂ

## ಮಾದರಿ ಪ್ರಶ್ನೆ ಪತ್ರಿಕೆ

## ವಿಷಯ : ಪ್ರಥಮ ಭಾಷೆ ಕನ್ನಡ

## ಪರಿಷ್ಕೃತ ಪಠ್ಯ ಪುಸ್ತಕಕ್ಕೆ ಅನುಗುಣವಾಗಿ ಕೆಳಕಾಣುವ ಬದಲಾವಣೆಗಳನ್ನು ಮಾಡಲಾಗಿದೆ.

## ಪ್ರಮುಖಾಂಶಗಳು

- 2016–17 ನೇ ಸಾಲಿನ ನೀಲ ನಕಾಶೆಯನ್ನು ಪರಿಷ್ಕರಿಸಿ 2017–18 ನೇ ಸಾಲಿಗೆ ಸಿದ್ಧಪಡಿಸಿದೆ.
- ಘಟಕವಾರು ಅಂಕ ಹಂಚಿಕೆಯು ಪುನರ್ ನಿಗದಿಯಾಗಿದೆ.
- ಇಲ್ಲಿರುವ ನೀಲ ನಕಾಶೆಯು ಕೇವಲ ಮಾದರಿಯಾಗಿದ್ದು, ಶಿಕ್ಷಕರ ಮಾಹಿತಿಗಾಗಿಯಷ್ಟೆ ನೀಡಲಾಗಿದೆ.
- ಪ್ರಶ್ನೆ ಪತ್ರಿಕೆಯನ್ನು ಪತ್ರಿಕಾ ವಿನ್ಯಾಸಕ್ಕಾಗಿಯಷ್ಟೆ ಅವಲೋಕಿಸುವುದು.
- ಉದ್ದಿಷ್ಟ, ಪ್ರಶ್ನೆ ಸ್ವರೂಪ, ಘಟಕವಾರು ಅಂಕ ವಿತರಣೆ ಮತ್ತು ಪ್ರಶ್ನಾ ಸಂಖ್ಯೆಗಳನ್ನು ಅನುಲಕ್ಷಿಸಿ ಶಿಕ್ಷಕರು ನೀಲ ನಕಾಶೆಯನ್ನು ಸಿದ್ಧಪಡಿಸಿಕೊಳ್ಳುವುದು.
- ನೀಲ ನಕಾಶೆ ಆಧಾರಿತ ಸಂತುಲಿತ ಪ್ರಶ್ನೆ ಪತ್ರಿಕೆಯನ್ನು ತಯಾರಿಸಿಕೊಂಡು ವಿದ್ಯಾರ್ಥಿಗಳನ್ನು ಬಾಹ್ಯ ಪರೀಕ್ಷೆಗೆ ಅಣಿಗೊಳಿಸುವುದು.
- ಪಠ್ಯ ಪುಸ್ತಕದಲ್ಲಿ ಇರುವ ವ್ಯಾಕರಣಾಂಶಗಳಲ್ಲಿ ಈ ಕೆಳಕಾಣುವ ಅಂಶಗಳನ್ನು ಆಧರಿಸಿ ವಸ್ತುನಿಷ್ಠ ಪ್ರಶ್ನೆಗಳನ್ನು ತಯಾರಿಸಿಕೊಳ್ಳುವುದು.

- ವ್ಯಾಕರಣಾಂಶಗಳು

| ಕ್ರ. ಸಂ. | ವ್ಯಾಕರಣಾಂಶಗಳು | ಅಂಕಗಳು |
|---|---|---|
| ೧ | ವರ್ಣಮಾಲೆ | ೧ |
| ೨ | ನಾಮಪದಗಳು | ೧ |
| ೩ | ಸರ್ವನಾಮಗಳು | ೧ |
| ೪ | ವಿಭಕ್ತಿ ಪ್ರತ್ಯಯಗಳು (ಹಳಗನ್ನಡ ಮತ್ತು ಹೊಸಗನ್ನಡ) | ೧ |
| ೫ | ಕ್ರಿಯಾಪದಗಳು (ಕಾಲರೂಪ ಮತ್ತು ಅರ್ಥರೂಪ) | ೧ |
| ೬ | ಸಂಧಿಗಳು ( ಕನ್ನಡ ಮತ್ತು ಸಂಸ್ಕೃತ ) | ೧ |
| ೭ | ಸಮಾಸಗಳು | ೧ |
| ೮ | ಅನ್ಯದೇಶ್ಯ ಪದಗಳು | ೧ |
| ೯ | ತತ್ಸಮ– ತದ್ಭವಗಳು | ೧ |
| ೧೦ | ಗ್ರಾಂಥಿಕರೂಪಗಳು | ೧ |
| ೧೧ | ದ್ವಿರುಕ್ತಿ–ಜೋಡುನುಡಿ | ೧ |
| ೧೨ | ಅವ್ಯಯಗಳು | ೧ |
| ೧೩ | ಕೃದಂತಗಳು | ೧ |
| ೧೪ | ತದ್ಧಿತಾಂತಗಳು | ೧ |
| ೧೫ | ವಾಕ್ಯ ಪ್ರಭೇದಗಳು | ೧ |
| ೧೬ | ಲೇಖನ ಚಿಹ್ನೆಗಳು | ೧ |
| ೧೭ | ಪದಗಳ ಅರ್ಥ | ೧ |
| ೧೮ | ಹೊಸಗನ್ನಡ ರೂಪ | ೧ |
| ೧೯ | ಛಂದಸ್ಸು | ೧ |
| ೨೦ | ಅಲಂಕಾರ | ೧ |

# ನೀಲ ನಕಾಶೆ

| ಕ್ರ.ಸಂ | ಪಾಠದ ಹೆಸರು | ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ.ನಿ | ಕಿ.ಉ.1 | ಕಿ.ಉ.2 | ದೀ.ಉ.2 | ವ.ನಿ | ಕಿ.ಉ.1 | ಕಿ.ಉ.2 | ದೀ.ಉ.1 | ದೀ.ಉ.2 | ವ.ನಿ | ಕಿ.ಉ.2 | ದೀ.ಉ.1 | ದೀ.ಉ.2 | ದೀ.ಉ.3 | ದೀ.ಉ.2 | ವ.ನಿ | ಕಿ.ಉ.1 | ಕಿ.ಉ.2 | ದೀ.ಉ.1 | ದೀ.ಉ.2 | ದೀ.ಉ.3 | | |
| 1 | ಯುದ್ಧ | | 1(1) | | | | | 2(1) | | | | | | | | | | 1(1) | 2(1) | | | | 3 | 2 |
| 2 | ಶಬರಿ | | 1(1) | | | | | | 3(1) | | | | | | | | | 1(1) | | 3(1) | | | 4 | 2 |
| 3 | ಲಂಡನ್ ನಗರ | | | | | | | | | | | | 3(1) | | | | | | | 3(1) | | | 3 | 1 |
| 4 | ಭಾಗ್ಯಶಿಲ್ಪಿಗಳು | | | | | | | | | | | | | 4(1)* | | | | | | | 4(1) | | 4 | 1 |
| 5 | ಎದೆಗೆ ಬಿದ್ದ ಅಕ್ಷರ | | 1(1) | | | | | 2(1) | | | | | | | | | | 1(1) | 2(1) | | | | 3 | 2 |
| 6 | ವ್ಯಾಘ್ರಗೀತೆ | | 1(1) | | | | | 2(1) | | | | | | | | | | 1(1) | 2(1) | | | | 3 | 2 |
| 7 | ವೃಕ್ಷಸಾಕ್ಷಿ | | 1(1) | | | | | 2(1) | | | | | | | | | | 1(1) | 2(1) | | | | 3 | 2 |
| 8 | ಸುಕುಮಾರಸ್ವಾಮಿಯ ಕಥೆ | | | | | | | | | | | | 3(1) | | | | | | | 3(1) | | | 3 | 1 |
| | ಗದ್ಯ ಒಟ್ಟು | | 1(5) | | | | | 2(4) | 3(1) | | | | 3(2) | 4(1)* | | | | 1(5) | 2(4) | 3(3) | 4(1) | | 26 | 13 |
| 1 | ಸಂಕಲ್ಪಗೀತೆ | | | | 4(1)* | | | | | | | | | | | | | | | | 4(1) | | 4 | 1 |
| 2 | ಹಕ್ಕಿಹಾರುತಿದೆ ನೋಡಿದಿರಾ | | | | | | | | | | | | | | | 4(1) | | | | | 4(1) | | 4 | 1 |
| 3 | ಹಲಗಲಿ ಬೇಡರು | | 1(1) | | | | | 2(1) | | | | | | | | | | 1(1) | 2(1) | | | | 3 | 2 |
| 4 | ಕೌರವೇಂದ್ರನ ಕೊಂದೆ ನೀನು | | | | | | | | | | | | | 4(1)* | | | | | | | 4(1) | | 4 | 1 |
| 5 | ಹಸುರು | | | | | | | | | | | | 3(1) | | | | | | | 3(1) | | | 3 | 1 |
| 6 | ಛಲಮನೆ ಮೆರೆವೆಂ | | 1(1) | | | | | | 3(1) | | | | | | | | | 1(1) | | 3(1) | | | 4 | 2 |
| 7 | ವೀರಲವ | | 1(1) | | | | | 2(1) | | | | | | | | | | 1(1) | 2(1) | | | | 3 | 2 |
| 8 | ಕೆಮ್ಮನೆ ಮೀಸೆವೊತ್ತನೇ | | | | | | | | | | | | 3(1) | | | | | | | 3(1) | | | 3 | 1 |

| | | | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | ಪದ್ಯ ಒಟ್ಟು | | 1(3) | | 4(1)* | | | 2(2) | 3(1) | | | | 3(2) | 4(1)* | | 4(1) | | 1(3) | 2(2) | 3(3) | 4(3) | | 28 | 11 |
| 1 | ಅಪಠಿತ ಗದ್ಯ | | | | | | | | | 4(1)# | | | | | | | | | | | | | 4 | 1 |
| 1 | ಸ್ವಾಮಿ ವಿವೇಕಾನಂದರ ಚಿಂತನೆ | | | | | | | 2(1) | | | | | | | | | | | 2(1) | | | | 2 | 1 |
| 2 | ವಸಂತ ಮುಖತೋರಲಿಲ್ಲ | | 1(1) | | | | | | | | | | | | | | | 1(1) | | | | | 1 | 1 |
| 3 | ಭಗತ್ ಸಿಂಗ್ | | | | | | | | | | | 2(1) | | | | | | | 2(1) | | | | 2 | 1 |
| 4 | ಮೃಗ ಮತ್ತು ಸುಂದರಿ | | | | | | | | | | | 2(1) | | | | | | | 2(1) | | | | 2 | 1 |
| 5 | ಜನಪದ ಒಗಟುಗಳು | | | | | | | 2(1) | | | | | | | | | | | 2(1) | | | | 2 | 1 |
| | ಪೋಷಕ ಅಧ್ಯಯನ ಒಟ್ಟು | | 1(1) | | | | | 2(2) | | | | 2(2) | | | | | | 1(1) | 2(4 | | | | 09 | 5 |
| 1 | ವ್ಯಾಕರಣ | 1(12 | | | | 1(2) | | | | | | | | | | | | | | | | | 14 | 14 |
| 2 | ಛಂದಸ್ಸು | | | | | | | | 3(1)* | | | | | | | | | | | | | | 3 | 1 |
| 3 | ಅಲಂಕಾರ | | | | | | | | 3(1)* | | | | | | | | | | | | | | 3 | 1 |
| 4 | ಗಾದೆ | | | | | | | | 3(1)* | | | | | | | | | | | | | | 3 | 1 |
| 5 | ಪತ್ರ / ಪ್ರಬಂಧ | | | | | | | | | | | | | | 5(2)* | | | | | | | | 10 | 2 |
| | ಒಟ್ಟು | 1(12 | | | | 1(2) | | | 3(3) | | | | | | 5(2) | | | | | | | | 33 | 19 |
| | ಸಮಗ್ರ ಒಟ್ಟು | 1(12) | 1(9) | | 4(1) | 1(2) | | 2(8) | 3(5) | 4(1) | | 2(2) | 3(4) | 4(2) | 5(2) | 4(1) | 1(14) | 1(9) | 2(10) | 3(9) | 4(5) | 5(2) | 100 | 49 |
| | ಶೇಕಡಾ ಪ್ರಮಾಣ | 25 | | | | 37 | | | | | 34 | | | | | 4 | 100 | | | | | | | |

**ಸೂಚನೆ :** ಆವರಣದ ಹೊರಗೆ ತಲಾ ಅಂಕ, ಆವರಣದ ಒಳಗೆ ಪ್ರಶ್ನಾ ಸಂಖ್ಯೆ ಇದೆ ಮತ್ತು # ಅಪಠಿತ ಗದ್ಯದಲ್ಲಿ 2 ಅಂಕಗಳ 2 ಪ್ರಶ್ನೆಗಳಿರುತ್ತಿದ್ದರೂ 4 ಅಂಕದ ಒಂದೇ ಪ್ರಶ್ನೆಯೆಂದು ಸೂಚಿಸಲಾಗಿದೆ. * ಆಯ್ಕೆಯಿದೆ

# ಪ್ರಶ್ನೆ ಪತ್ರಿಕೆಯ ವಿನ್ಯಾಸ ಹಾಗೂ ನೀಲ ನಕಾಶೆ

# CCE - RF

# [ಶಾಲಾ ಅಭ್ಯರ್ಥಿಗಳಿಗಾಗಿ]

# ವಿಷಯ : ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕಗಳು : 100** **ಅವಧಿ : 3 ಗಂಟೆಗಳು**

**1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ :**

| ಉದ್ದಿಷ್ಟಗಳು | ಪ್ರತಿಶತ | ದತ್ತ ಅಂಕಗಳು |
|---|---|---|
| ಸ್ಮರಣೆ | 25 | 25 |
| ಗ್ರಹಿಕೆ | 37 | 37 |
| ಅಭಿವ್ಯಕ್ತಿ | 34 | 34 |
| ಪ್ರಶಂಸೆ | 04 | 04 |
| ಒಟ್ಟು | 100 | 100 |

**2.ವಿಷಯಾನುಸಾರ ಪ್ರಾಮುಖ್ಯತೆ :**

| ವಿಷಯ/ ಉಪಘಟಕ | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳು |
|---|---|---|---|
| ಗದ್ಯ | 26 | 26 | 13 |
| ಪದ್ಯ | 28 | 28 | 11 |
| ಪಠ್ಯ ಪೋಷಕ ಅಧ್ಯಯನ | 09 | 09 | 05 |
| ಅಪಠಿತ ಗದ್ಯ | 04 | 04 | 1 |
| ವ್ಯಾಕರಣಾಂಶಗಳು, ಛಂದಸ್ಸು, ಅಲಂಕಾರ ಮತ್ತು ವಾಕ್ಯ ರಚನೆ | 33 | 33 | 19 |
| ಒಟ್ಟು | 100 | 100 | 49 |

3 ಪ್ರಶ್ನಾನುಸಾರ ಪ್ರಾಮುಖ್ಯತೆ :

| ಪ್ರಶ್ನೆಗಳ ವಿಧಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ | ಅಪೇಕ್ಷಿತ ಸಮಯ |
|---|---|---|---|---|
| ವಸ್ತುನಿಷ್ಠ | 14 | 14 | 14 | 25 ನಿಮಿಷಗಳು |
| ಕಿರು ಉತ್ತರಗಳು (1) | 09 | 09 | 09 | 15 ನಿ. |
| ಕಿರು ಉತ್ತರಗಳು (2) | 20 | 20 | 10 | 35 ನಿ. |
| ದೀರ್ಘ ಉತ್ತರಗಳು (1) | 27 | 27 | 09 | 45 ನಿ. |
| ದೀರ್ಘ ಉತ್ತರಗಳು (2) | 20 | 20 | 05 | 25 ನಿ. |
| ದೀರ್ಘ ಉತ್ತರಗಳು (3) | 10 | 10 | 02 | 20 ನಿ. |
| ಒಟ್ಟು | 100 | 100 | 49 | 165 + 15 ನಿಮಿಷಗಳು |

4. ಕಠಿಣತೆಯ ಮಟ್ಟ :

| ಸುಲಭ | ಸಾಧಾರಣ | ಕಠಿಣ | ಒಟ್ಟು |
|---|---|---|---|
| 30% | 50% | 20% | 100 % |

5 . ಪ್ರಶ್ನೆಗಳ ಸ್ವರೂಪ ಮತ್ತು ಅಂಕ ವಿತರಣೆ :

| | | |
|---|---|---|
| ಬಹು ಆಯ್ಕೆ ಪ್ರಶ್ನೆಗಳು | 1 ಅಂಕದ 14 ಪ್ರಶ್ನೆಗಳು | 14 * 1 = 14 |
| ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 09 ಪ್ರಶ್ನೆಗಳು | 09 * 1 = 09 |
| 3–4 ವಾಕ್ಯಗಳಲ್ಲಿ ಉತ್ತರಿಸುವುದು | 2 ಅಂಕಗಳ 10 ಪ್ರಶ್ನೆಗಳು | 10 * 2 = 20 |
| 5–6 ವಾಕ್ಯಗಳಲ್ಲಿ ಉತ್ತರಿಸುವುದು | 3 ಅಂಕಗಳ 9 ಪ್ರಶ್ನೆಗಳು | 9 * 3 = 27 |
| 5–6 ವಾಕ್ಯಗಳಲ್ಲಿ ಉತ್ತರಿಸುವುದು | 4 ಅಂಕಗಳ 5 ಪ್ರಶ್ನೆಗಳು | 5 * 4 = 20 |
| ಪ್ರಬಂಧ & ವಿಸ್ತಾರವಾಗಿ ಉತ್ತರಿಸುವುದು | 5 ಅಂಕಗಳ 2 ಪ್ರಶ್ನೆಗಳು | 2 * 5 = 10 |
| ಒಟ್ಟು | 49 ಪ್ರಶ್ನೆಗಳು | 100 ಅಂಕಗಳು |

6. ಪ್ರಶ್ನೆ ಪತ್ರಿಕೆ ಅಂಕ ವಿತರಣೆ :

ಗದ್ಯ : 26, ಪದ್ಯ : 28, ಪಠ್ಯ ಪೋಷಕ ಅಧ್ಯಯನ : 09, ಅಪಠಿತ ಗದ್ಯ 04,

ವ್ಯಾಕರಣ, ಅಲಂಕಾರ, ಛಂದಸ್ಸು ಮತ್ತು ವಾಕ್ಯರಚನೆ : 33

ಒಟ್ಟು : 100 ಅವಧಿ : 3 ಗಂಟೆಗಳು

| ಪ್ರಶ್ನೆಗಳ ಸ್ವರೂಪ | ಗದ್ಯ | ಪದ್ಯ | ಅಪಠಿತ ಗದ್ಯ | ಪೋಷಕ ಅಧ್ಯಯನ | ವ್ಯಾಕರಣ | ವಾಕ್ಯ ರಚನೆ | ಒಟ್ಟು |
|---|---|---|---|---|---|---|---|
| 1. ಬಹು ಆಯ್ಕೆ | – | – | – | – | 10*1 =10 | – | 10 |
| 2. ಸಂಬಂಧೀಕರಿಸಿ ಬರೆಯುವುದು | – | – | – | – | 4*1= 4 | – | 04 |
| 3. ಒಂದು ವಾಕ್ಯದ ಉತ್ತರಗಳು | 5*1=5 | 3*1=3 | – | 1*1=1 | – | – | 09 |
| 4. ಮೂರು ನಾಲ್ಕು ವಾಕ್ಯಗಳ ಉತ್ತರಗಳು | 4*2=8 | 2*2=4 | – | 4*2=08 | – | – | 20 |
| 5. ಐದಾರು ವಾಕ್ಯಗಳ ಉತ್ತರಗಳು – ಸಂದರ್ಭಗಳು | 2*3=6 | 2*3=6 | – | – | – | – | 12 |
| 6. ಕವಿ ಕೃತಿ ಪರಿಚಯ | 1*3=3 | 1*3=3 | – | – | – | – | 06 |
| 7. ಛಂದಸ್ಸು | – | – | – | – | 1*3=3 | – | 03 |
| 8. ಅಲಂಕಾರ | | – | – | – | 1*3=3 | – | 03 |
| 9. ಗಾದೆಗಳು | | | – | | | 1*3=3 | 03 |
| 10. ಕಂಠಪಾಠ | – | 1*4=4 | – | – | – | – | 04 |
| 11. ಪದ್ಯವನ್ನು ಓದಿ ಅರ್ಥೈಸಿಕೊಂಡು, ಅಡಕಗೊಂಡ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು | – | 1*4=4 | – | – | – | – | 04 |
| 12. ಎಂಟು/ಹತ್ತು ವಾಕ್ಯಗಳ ಉತ್ತರಗಳು | 1*4 =4 | 1*4=4 | – | – | – | – | 08 |
| 13. ಅಪಠಿತ ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು. | – | – | 1*4 =4 | – | – | – | 04 |
| 14. ಪತ್ರ ಲೇಖನ | – | – | – | – | – | 1*5=5 | 05 |
| 15. ಪ್ರಬಂಧ ರಚನೆ | – | – | – | – | – | 1*5=5 | 05 |
| ಒಟ್ಟು | 26 | 28 | 04 | 09 | 20 | 13 | 100 |

# ಪ್ರಥಮ ಭಾಷೆ ಕನ್ನಡ

ಗರಿಷ್ಠ ಅಂಕ : 100 **ಮಾದರಿ ಪ್ರಶ್ನೆ ಪತ್ರಿಕೆ** ಅವಧಿ : 3 ಗಂಟೆಗಳು

ಸೂಚನೆಗಳು : ಪ್ರಶ್ನೆ ಪತ್ರಿಕೆಯು ಎ, ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.

ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ.

ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.

## ಭಾಗ – 'ಎ'

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 9*1=9

1. ರಾಹಿಲನು ತುರ್ತುಪರಿಸ್ಥಿತಿಯ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?
2. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
3. ಇಂದಲ್ಲ–ನಾಳೆ ಫಲಕೊಡುವ ಅಂಶಗಳಾವುವು?
4. ಹುಲಿಗೆ ಪರಮಾನಂದವಾಗಲು ಕಾರಣ ಏನು?
5. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?
6. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?
7. ದಿನಪಸುತ ಎಂದರೆ ಯಾರು?
8. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?
9. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?

ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ 10 * 2 = 20

10. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?
11. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?
12. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
13. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?
14. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?
15. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ತಿಳಿಸಿ.
16. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?
17. ಭಗತ್‌ಸಿಂಗ್ ತನ್ನ ಸಹೋದರಿಗೆ 'ತ್ಯಾಗದ ಪ್ರತೀಕ ಆ ಮಣ್ಣು' ಎಂದು ತೋರಿಸಿದ ಸಂದರ್ಭವನ್ನು ವಿವರಿಸಿ.
18. ಮೃಗದ ಬಗೆಗೆ ಸುಂದರಿಯ ಮನ ಕರಗುತ್ತಿತ್ತು ಏಕೆ?
19. ಒಗಟುಗಳಿಂದ ಶೈಕ್ಷಣಿಕವಾಗಿ ಆಗುವ ಲಾಭ ಏನು?

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 4 * 3 = 12

20. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ."

21. "ರಿಸಿಯರ ರೂಪಂ ಕಾಣ್ಬುಮಂದೀತನುಂ ತಪಂಬಡುಗುಂ"

22. "ಹಸುರಾದುದು ಕವಿಯಾತ್ಮಂ"

23. "ಈಗಳೊಂದಡಕೆಯುಮಿಲ್ಲ ಕೈಯೊಳ್"

ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.
2*3 =6

24. ಪು.ತಿ ನರಸಿಂಹಾಚಾರ್ಯ

25. ರನ್ನ

ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1*4=4

26. ಕಲುಷಿತವಾದೀ ______________

______________________

______________________

____________ ಮುಟ್ಟೋಣ ॥

ಅಥವಾ

ಮತಗಳೆಲ್ಲವೂ ______________

______________________

______________________

____________ ಬಿತ್ತೋಣ ॥

ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1*4=4

27. ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳ ಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ?

ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2*4=8

28. ನಾಲ್ವಡಿಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

ಅಥವಾ

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ವಿವರಿಸಿ.

29. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?

ಅಥವಾ

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

**4 = (2+2)**

**30.** ಸಿ.ವಿ.ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು, ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ತಮ್ಮ ನಡುವೆ ಮೇಲು ಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು, ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಬೆಳಿಗ್ಗೆ ಪ್ರಯೋಗಾಲಯಕ್ಕೆ ಬಂದಕೂಡಲೆ ಒಂದು ಸುತ್ತು ಹೊರಟು ಎಲ್ಲ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದನೆಂದರೆ, ಬೆನ್ನುತಟ್ಟಿ, ಅವನನ್ನು ಎಲ್ಲರ ಎದುರಿಗೂ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

ಪ್ರಶ್ನೆಗಳು :

1. ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾವನೆ ಏನಾಗಿತ್ತು?
2. ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.

## ಭಾಗ – 'ಬಿ'

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. **10 * 1 = 10**

**31.** 'ಶ್ಚುತ್ವ ಸಂಧಿಗೆ' ಉದಾಹರಣೆಯಾದ ಪದ :

(ಎ) ಅಷ್ಟೈಶ್ವರ್ಯ (ಬಿ) ಬೃಹಚ್ಛತ್ರ (ಸಿ) ಜ್ಞಾನೇಶ್ವರ (ಡಿ) ಕೋಟ್ಯಧೀಶ್ವರ

**32.** ತಾವು ಕಡಿಮೆ ಮಾತನಾಡಿದ್ದೀರಿ ಹೆಚ್ಚು ಕೆಲಸ ಮಾಡಿದ್ದೀರಿ ಈ ವಾಕ್ಯದಲ್ಲಿ ಇರಬೇಕಾದ ಲೇಖನ ಚಿಹ್ನೆ :

(ಎ) ಅಲ್ಪವಿರಾಮ (ಬಿ) ಆವರಣ (ಸಿ) ಅರ್ಧವಿರಾಮ (ಡಿ) ಪ್ರಶ್ನಾರ್ಥಕ

**33.** "ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುತ್ತದೆ" ಈ ವಾಕ್ಯದಲ್ಲಿರುವ ಕಾಲಪ್ರತ್ಯಯ :

(ಎ) ಗಳ (ಬಿ) ಅಲ್ಲಿ (ಸಿ) ಉತ್ತ (ಡಿ) ಅದೆ

**34.** 'ನೆಯ್ದವಸ್ತ್ರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :

(ಎ) ದ್ವಂದ್ವ (ಬಿ) ಕ್ರಿಯಾ (ಸಿ) ತತ್ಪುರುಷ (ಡಿ) ಗಮಕ

**35.** 'ಲಿಖಿತಮಂ' ಪದವು ಈ ವಿಭಕ್ತಿಯಲ್ಲಿದೆ.

(ಎ) ಪ್ರಥಮಾ (ಬಿ) ದ್ವಿತೀಯಾ (ಸಿ) ತೃತೀಯಾ (ಡಿ) ಚತುರ್ಥಿ

**36.** 'ಅನ್ವರ್ಥನಾಮ' ಪದಕ್ಕೆ ಉದಾಹರಣೆಯಿದು :

(ಎ) ವ್ಯಾಪಾರಿ (ಬಿ) ಮನುಷ್ಯ (ಸಿ) ಆಗ್ನೇಯ (ಡಿ) ಕಮಲಾಕ್ಷ

37. ‘ಅನಾನಸು’ ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ :

(ಎ) ಪೋರ್ಚುಗೀಸ್ (ಬಿ) ಉರ್ದು (ಸಿ) ಫಾರ್ಸಿ (ಡಿ) ರೋಮನ್

38. “ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ” ಅಂತಹ ವಾಕ್ಯವು :

(ಎ) ನಿಷೇಧಾರ್ಥಕ ವಾಕ್ಯ (ಬಿ) ಮಿಶ್ರ ವಾಕ್ಯ (ಸಿ) ಸಂಯೋಜಿತ ವಾಕ್ಯ (ಡಿ) ಸಾಮಾನ್ಯ ವಾಕ್ಯ

39. ತದ್ಧಿತಾಂತ ಅವ್ಯಯಕ್ಕೆ ಉದಾಹರಣೆಯಾದ ಪದ ಇದು :

(ಎ) ಜಾಣತನ (ಬಿ) ಕನ್ನಡತಿ (ಸಿ) ಚಂದ್ರನಂತೆ (ಡಿ) ಉಡುಗೆ

40. ಕೊಟ್ಟಿರುವ ಧಾತುಗಳಲ್ಲಿ ಅಕರ್ಮಕಧಾತು ಪದವಿದು :

(ಎ) ಕೊಡು (ಬಿ) ಬಿಡು (ಸಿ) ಓಡು (ಡಿ) ನೋಡು

ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4 * 1 = 4

41. ವಿದ್ಯಾಧರ : ಬಿಜ್ಜೋದರ : : ವೈಶಾಖ : ___________

42. ಹಾಲ್ಜೇನು : ಜೋಡುನುಡಿ : : ನಟ್ಟನಡುವೆ : ___________

43. ಸ್ಥೈರ್ಯ : ದೃಢತೆ : : ಮುಕ್ತಕಂಠ : ___________

44. ಆದ್ದರಿಂದ : ಸಂಬಂಧಾರ್ಥಕ ಅವ್ಯಯ : : ಚುರುಚುರು : ___________

45. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.

1*3=3

ಕಾದದಿರೆನಜ್ಜ ಪಾಂಡವ ।
ರಾದರ್ ಮೇಣೆಂದಿನೊಂದೆ ಸಮರದೊಳಾಂ ಮೇಣ್ ॥

ಅಥವಾ

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ।

46. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 1 * 3 =3

“ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ”

ಅಥವಾ

“ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು”

## ಭಾಗ – ‘ಸಿ’

47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1 * 3 = 3

- ದೇಶ ನೋಡು ಕೋಶ ಓದು
- ಮಾಡಿದ್ದುಣ್ಣೋ ಮಹಾರಾಯ
- ತಾಳಿದವನು ಬಾಳಿಯಾನು

48. ನಿಮ್ಮನ್ನು ವಿಜಯಪುರದ ಮುರಾರ್ಜಿ ವಸತಿ ಶಾಲೆಯ ‘ಸಮರ್ಥ’ ಎಂದು ಭಾವಿಸಿಕೊಂಡು, ಅಚಿತರಶಾಲಾ ವಿಜ್ಞಾನ ವಸ್ತುಪ್ರದರ್ಶನ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ನಿಮ್ಮೂರಿನ ವಿಜಯ ಕರ್ನಾಟಕ ದಿನಪತ್ರಿಕೆಯ ಸಂಪಾದಕರಿಗೆ ಮನವಿಪತ್ರ ಬರೆಯಿರಿ. 1 * 5 = 5

ಅಥವಾ

ನಿಮ್ಮನ್ನು ಬನಶಂಕರಿಯ ಸರ್ಕಾರಿ ಪ್ರೌಢಶಾಲೆಯ 'ಹರ್ಷಿತ' ಎಂದು ಭಾವಿಸಿಕೊಂಡು, ಮಂಗಳೂರಿನಲ್ಲಿ ವಾಸವಾಗಿರುವ ತಾಯಿಯವರಿಗೆ ವಿದ್ಯಾಭ್ಯಾಸದ ಪ್ರಗತಿಯನ್ನು ವಿವರಿಸಿ ಪತ್ರ ಬರೆಯಿರಿ.

**49.** ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. **1 * 5 = 5**

- ಜ್ಞಾನಾಭಿವೃದ್ಧಿಯಲ್ಲಿ ವೃತ್ತಪತ್ರಿಕೆಗಳ ಪಾತ್ರ
- ಶಾಲೆಯಲ್ಲಿ ಸಹಪಠ್ಯ ಚಟುವಟಿಕೆಗಳ ಮಹತ್ತ್ವ
- ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

----@----